## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.08/2021**
**ಪಿಡಬ್ಲ್ಯೂ-01 (ಸಿಡಬ್ಲ್ಯೂ-04)**

ಸಾಕ್ಷಿದಾರರ ಹೆಸರು : ಅಬ್ದುಲ ಮಣಿಯಾರ
ತಂದೆ/ಗಂಡನ ಹೆಸರು : ಅಯ್ಯುಮಸಾಬ
ವಯಸ್ಸು : 40 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ದೇವರ ನಿಂಬರಗಿ

**ಸಾಕ್ಷಿಗೆ ಇಂದು ದಿನಾಂಕ :- 18/11/2022 ರಂದು ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ-9 ನನಗೆ ಪರಿಚಯ ಇಲ್ಲ. ನಾನು ಆರೋಪಿತರನ್ನು ನೋಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನಗೆ ಕರೆದುಕೊಂಡು ಹೋಗಿದ್ದರು. ಈ ಪ್ರಕರಣದಲ್ಲಿ ನನಗೆ ಎಲ್ಲಿಯೂ ಕರೆದುಕೊಂಡು ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ತೂಕ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

2. ದಿನಾಂಕಃ 02.03.2018 ರಂದು ಧುಮಕಾನಳ ಕ್ರಾಸ ಹತ್ತಿರ ನಮ್ಮ ಜಮೀನದಲ್ಲಿದ್ದಾಗ ಚಾಸಾ-9 ಪಿಎಸ್ಐ ನನಗೆ ಬರಲು ಹೇಳಿರುತ್ತಾರೆ ಅಂತಾ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಪಿಎಸ್ಐರವರು ನಾನು ಧುಮಕನಾಳ ಕ್ರಾಸ ಹತ್ತಿರ ಇರುವಾಗ ಭೇಟಿಯಾಗಿದ್ದರು ಎಂದರೆ ಸರಿಯಲ್ಲ. ಅವರು ನನಗೆ ಧುಮಕನಾಳ ಗ್ರಾಮದ ಗೊಳಸಂಗಿ ಇವರ ಹೊಲದ ರಸ್ತೆಯ ಹಿಂದಿನ ಬಾಂದಿಗೆ 1 ನೇ ಆರೋಪಿ ಸೋಮು ಚವ್ಹಾಣ ಈತನು ತನ್ನೊಂದಿಗೆ ಇನ್ನೊಬ್ಬನನ್ನು ಸೇರಿಸಿಕೊಂಡು ಗಸಗಸೆ

ಮಂಡೆಯ ಮೇಲಿನ ತೊಗಟೆಗಳನ್ನು ಅನಧಿಕೃತವಾಗಿ ಸಂಗ್ರಹಿಸಿ ತನ್ನ ಕ್ರೂಜರ ವಾಹನದಲ್ಲಿ ಸಾಗಿಸುತ್ತಿದ್ದಾರೆ ಎಂದು ಬಾತ್ಮಿ ಬಂದಿದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆಗ ನನಗೆ ಸಿಕ್ಕ ವಸ್ತುಗಳನ್ನು ಸರಿಯಾಗಿ ತೂಕ ಮಾಡಲು ತಿಳಿಸಿದ್ದರಿಂದ, ನಾನು ಅದಕ್ಕೆ ಒಪ್ಪಿ ಚಾಸಾ-1 ರವರ ಜೀಪನಲ್ಲಿ ಹತ್ತಿ ಬಾತ್ಮಿ ಸ್ಥಳಕ್ಕೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಮರೆಯಾಗಿ ನಿಂತು ನೋಡಿದೆವು ಎಂದರೆ ಸರಿಯಲ್ಲ. ಒಂದು ಕ್ರೂಜರ ವಾಹನ ನಿಂತಿತ್ತು ಎಂದರೆ ಸರಿಯಲ್ಲ. ಅಲ್ಲಿ ನ್ಯಾಯಾಲಯದ ಮುಂದಿರುವ ಅರೋಪಿತರು ಇದ್ದರು ಎಂದರೆ ಸರಿಯಲ್ಲ. ಒಬ್ಬನು ವಾಹನದಿಂದ ಚೀಲಗಳನ್ನು ಒಳಗಿನಿಂದ ಎತ್ತಿ ಕೊಡುತ್ತಿದ್ದನು ಹಾಗೂ ಇನ್ನೊಬ್ಬನು ಅವುಗಳನ್ನು ಕೆಳಗೆ ಇಡುತ್ತಿದ್ದನು ಎಂದರೆ ಸರಿಯಲ್ಲ. ನಾನು, ಚಾಸಾ-1, ಪಂಚರು, ಡಾಕ್ಟರರು ಹಾಗೂ ಫೊಟೋ ತೆಗೆಯುವರು ಕೂಡಿ ಘೇರಾವ ಹಾಕಿ ಆರೋಪಿತರನ್ನು ಹಿಡಿದು ಹೆಸರು ಕೇಳಿದೆವು ಎಂದರೆ ಸರಿಯಲ್ಲ. ಅವರಲ್ಲಿ ಒಬ್ಬನು ಸೋಮು ಚವ್ಹಾಣ ಹಾಗೂ ಇನ್ನೊಬ್ಬ ಸುನೀಲ ಚವ್ಹಾಣ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವರು ಸಾಗಿಸುತ್ತಿದ್ದ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ಗಸಗಸೆ ಬಂಡೆಯ ಮೇಲಿನ ತೊಗಟೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಅವರ ಹತ್ತಿರ ಯಾವುದೇ ಪರವಾನಗೆ ಇರಲಿಲ್ಲ ಎಂದರೆ ಸರಿಯಲ್ಲ. ಅವು ಒಟ್ಟಾಗಿ 7 ಚೀಲಗಳಲ್ಲಿ ಇದ್ದು, ಅವುಗಳನ್ನು ನಾನು ಒಂದೊಂದು ತೂಕ ಮಾಡಿದೆ ಎಂದರೆ ಸರಿಯಲ್ಲ.

3. 1 ನೇ ಸಾಲಪೀಟ ಚೀಲದಲ್ಲಿ 24.5 ಕೆಜಿ ಗಸಗಸೆ ತೊಗಟೆ, 2 ನೇ ಚೀಲದಲ್ಲಿ 13.5 ಕೆಜಿ, 3 ನೇ ಚೀಲದಲ್ಲಿ 9.250 ಕೆ.ಜಿ, 4 ನೇ ಚೀಲದಲ್ಲಿ 25 ಕೆಜಿ, 5 ನೇ ಚೀಲದಲ್ಲಿ 25.250 ಕೆಜಿ, 6 ನೇ ಚೀಲದಲ್ಲಿ 24 ಕೆಜಿ ಹಾಗೂ 7 ನೇ ಚೀಲದಲ್ಲಿ 3 ಕೆಜಿ, ಹೀಗೆ ಒಟ್ಟು 124 ಕಜಿ ಗಸಗಸೆಯ ಬಂಡೆಯ ಮೇಲೆನ ತೊಗಟೆಗಳು ದೊರತವು ಎಂದರೆ ಸರಿಯಲ್ಲ. ಅವುಗಳಲ್ಲಿ ನ್ಯಾಯಾಲಯದ ಮುಂದಿರುವ

ಶ್ಯಾಂಪಲಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಶೀಲ್ ಮಾಡಿದರು ಎಂದರೆ ಸರಿಯಲ್ಲ. ಚಾಸಾ-1 ಇವರು ಮುದ್ದೆಮಾಲು, ವಾಹನ ಹಾಗೂ ಆರೋಪಿತರನ್ನು ತಮ್ಮ ವಶಕ್ಕೆ ಪಡೆದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿಯಾಗಿ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರವಾಗಿಃ ಇಲ್ಲ.**

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.